ನಾನು ಮರುದಿನ ಮದುವೆ ಮಾಡಿಕೊಳ್ಳಲು ರಿಜಿಸ್ಟರ್ ಆಫೀಸಿಗೆ ಹೋಗಲಿಲ್ಲ. ಅಲ್ಲಿಂದ ಮುಂದೆ ಮರು ಮದುವೆಯ ಆಲೋಚನೆಯನ್ನು ಮಾಡಲಿಲ್ಲ, ಮುಂದಿನ ಜೀವನದ ದಾರಿಯನ್ನು ಒಂಟಿಯಾಗಿ ಮಗನೊಟ್ಟಿಗೆ ಸಾಗಲು ನಿಶ್ಚಯಿಸಿದೆ.

'ಅಮ್ಮ ನಾನಂತೂ ಐಎಎಸ್ ಆಫೀಸರ್ ಆಗುವವನು, ನೀನು ಜಿಲ್ಲಾ ಕಲೆಕ್ಟರಿನ ಅಮ್ಮ, ಆಮೇಲೆ ನಮ್ಮ ತಿರುಗಾಟ ಕಾರಿನಲ್ಲೇ' ಎನ್ನುತ್ತಾ ಮಗ ನನಗೆ ಕನಸು ಕಾಣವುದನ್ನು ಹೇಳಿಕೊಟ್ಟ. ತಲೆಯಲ್ಲಿ ಬಿಳಿ ಕೂದಲು ಕಾಣತೊಡಗಿದ ಮಗ ಐ.ಎ.ಎಸ್. ಆಫೀಸರ್ ಆದ. ಹೇಳಿದಂತೆ ನನ್ನನ್ನು ಕಾರಿನಲ್ಲಿ ತಿರುಗಾಡಿಸಿದ, ಅದು ನನ್ನ ಜೀವನದ ಅತೀ ಸಂತೋಷದ ದಿನಗಳಾಗಿತ್ತು.

ನನ್ನ ಜೀವನದಲ್ಲಿ ಸುಖದ ದಿನಗಳು ಹೆಚ್ಚು ದಿವಸ ಇರುವುದಿಲ್ಲವೇನೊ. 'ಅಮ್ಮ ನಾನು ಡಾಕ್ಟರ್ ರಾಜಾರಾಮರ ಮಗಳು ಸೀಮಾಳನ್ನು ಪ್ರೀತಿಸುತ್ತಿದ್ದೇನೆ, ನೀನು ಒಪ್ಪಿಗೆ ಕೊಟ್ಟರೆ ದೀಪಾವಳಿಯ ನಂತರ ಮದುವೆಯಾಗುವ ಆಲೋಚನೆ'. ಎಲ್ಲವನ್ನೂ ತನ್ನಷ್ಟಕ್ಕೇ ತಾನೇ ಮಾಡಿದ ಆಕಾಶ ಮದುವೆಯಂತಹ ವಿಷಯದಲ್ಲೂ ಅಮ್ಮನಿಗೆ ಹುಡುಕುವ ಕಷ್ಟ ಕೊಡಲಿಲ್ಲ. 'ಆಕಾಶ ಇದು ನಮ್ಮ ಅಂತಸ್ಥಿತಿಗೆ ತಕ್ಕ ಸಂಬಂಧವಲ್ಲಪ್ಪ, ಸರಿಯಾಗಿ ಇನ್ನೊಮ್ಮೆ ಆಲೋಚಿಸಿ ನೋಡು, ನಾನು ನಿನ್ನಿಷ್ಟಕ್ಕೆ ಅಡ್ಡ ಬರುವವಳಲ್ಲ' ಎಂದು ನಿಟ್ಟುಸಿರು ಬಿಟ್ಟೆ. ಆಕಾಶನ ಮದುವೆ ಸೀಮಾ ಮತ್ತು ಸೀಮಾಳ ಮನೆಯವರು ಇಷ್ಟಪಟ್ಟಂತೆ ಗೌಜಿ ಗದ್ದಲದಲ್ಲಿ ನಡೆಯಿತು. ಮದುವೆಯಲ್ಲಿ ನಮ್ಮ ಕಡೆಯವರು ಬೆರಳೆಣಿಕೆ ಯಷ್ಟಿದ್ದರು. ಮದುವೆಯಾಗಿ ಅತ್ತೆ, ಸೊಸೆ ಒಂದೇ ಸೂರಿನಡಿಯಲ್ಲಿದ್ದರೂ ಉತ್ತರ ಧ್ರುವ, ದಕ್ಷಿಣ ಧ್ರುವದಲ್ಲಿದ್ದಂತಿದ್ದೆವು. ನಮ್ಮಿಬ್ಬರಲ್ಲಿ ಮಾತುಗಳೇ ಇಲ್ಲ ಎನ್ನಬಹುದು. ಸೀಮಾ ಸದಾ ಸ್ನೇಹಿತರು, ತನ್ನ ತವರಿನ ಕಡೆಯವರೊಟ್ಟಿಗೆ ಓಡಾಡಿಕೊಂಡಿದ್ದರೆ, ನಾನು ನನ್ನ ಪಾಡಿಗೆ ಶಾಲೆ, ಮನೆಯೆಂದು ಇರತೊಡಗಿದೆ. ತೊಂದರೆ ಬಂದದ್ದು ರಿಟೈರ್ ಆದಾಗಲೇ.

ಸ್ವಾಭಿಮಾನಿಯಾದ ನಾನು ನನ್ನ ಮನೆಯಲ್ಲೇ ಅತಿಥಿಯಂತೆ ಇರಬೇಕಾಗಿ ಬಂದಾಗ ಮಗನೊಡನೆ ಅಂದೆ. 'ಆಕಾಶ, ಯಾಕೋ ಬೇಜಾರು, ನನ್ನದೇ ವಯಸ್ಸಿನವರೊಡನೆ ಇರಬೇಕೆಂದು ತೋರುತ್ತಿದೆ, ಇದೇ ಊರಿನಲ್ಲಿರುವ ವೃದ್ಧಾಶ್ರಮ ಸೇರಿದರೆ ಹೇಗೆಂದು ಆಲೋಚಿಸುತ್ತಿದ್ದೇನೆ' ಅಂದಾಗ ಮಗನಿಗೆ ಅರ್ಥವಾಯಿತು ಅತ್ತೆ, ಸೊಸೆಯರ ನಡುವೆ ತಣ್ಣಗೆ ನಡೆಯುತ್ತಿದ್ದ ಯುದ್ಧ, ಹೆಚ್ಚು ಮಾತನಾಡದೇ ಅದೇ ಊರಿನಲ್ಲಿದ್ದ ವೃದ್ಧಾಶ್ರಮಕ್ಕೆ ಸೇರಿಸಿದ. ಮೊದಮೊದಲು ನನ್ನನ್ನು ನೋಡಲು ವೃದ್ಧಾಶ್ರಮಕ್ಕೆ ತಿಂಗಳಿಗೊಮ್ಮೆ ಬರುತ್ತಿದ್ದ ಆಕಾಶ ಮಗ ಹುಟ್ಟಿದ ಮೇಲೆ ಆಶ್ರಮಕ್ಕೆ ಬರುವುದು ಅಪರೂಪವಾಯಿತು. ಮುಂದಿನದು ನಿಮಗೆ ಗೊತ್ತಿದ್ದದ್ದೇ. ಇಷ್ಟು ದಿನ ಒಡಲಲ್ಲಿ ಇಟ್ಟುಕೊಂಡಿದ್ದ ಉರಿಯನ್ನು ರಾಜೇಶನ ಮುಂದೆ ತೆಗೆದಾಗ ಮನಸ್ಸು ಹಗುರವಾಯಿತು.

ನನ್ನ ಕತೆಯನ್ನೆಲ್ಲಾ ರಾಜೇಶನೊಡನೆ ಹೇಳಿ ಮುಗಿಸುತ್ತಿದ್ದಂತೆ, ರಾಜೇಶ ನನ್ನ ಕೈಯನ್ನು ತಮ್ಮ ಕೈಯಲ್ಲಿ ಹಿಡಿದುಕೊಂಡು 'ಗೊತ್ತಿತ್ತು ಮೇಡಂ, ಇಂತಹದೇ ಒಂದು ಕತೆ ನಿಮ್ಮ ಸುಂದರ ಮುಖದ ಹಿಂದೆ ಇದೆಯೆಂದು, ನಮ್ಮ ಮನೆ ತುಂಬಲು ನೀವಲ್ಲದೆ ಮತ್ಯಾರಿಗೂ ಸಾಧ್ಯವಿಲ್ಲ' ಎಂದರು ರಾಜೇಶ. ಪ್ರಶ್ನಾರ್ಥಕವಾಗಿ ಅವರ ಮುಖ ನೋಡಿದಾಗ 'ನಮ್ಮ ಮನೆಗೆ ಬಂದವರು ನನ್ನ ತಂದೆಯನ್ನು ನೋಡಿದಿರಲ್ಲಾ, ಎರಡು ವರ್ಷದ ಹಿಂದೆ ಹೀಗಿರಲಿಲ್ಲ ಉತ್ಸಾಹದ ಚಿಲುಮೆಯಾಗಿದ್ದರು. ನಮ್ಮದು ಆಡಿಟರ್ ಕುಟುಂಬ, ದಿನನಿತ್ಯ ಮನೆಗೆ ಬಂದು ಹೋಗುವವರು ಹತ್ತಾರು ಜನರು, ರೋಟರಿ ಕ್ಲಬ್, ಆ ಸಂಘ, ಈ ಸಂಘವೆಂದು ಡ್ಯಾಡಿ ಸದಾ ಬ್ಯುಸಿ. ಮಮ್ಮಿ ಡ್ಯಾಡಿಯ ಬೆನ್ನೆಲುಬಿನಂತಿದ್ದರು. ಎರಡು ವರ್ಷಗಳ ಹಿಂದೆ ಕ್ಯಾನ್ಸರ್ ಬಂದು ಮಮ್ಮಿ ಕಣ್ಣು ಮುಚ್ಚಿದಾಗ ಡ್ಯಾಡಿ ಒಮ್ಮಲೆ ಮೌನಿಯಾದರು. ಎಲ್ಲದರಲ್ಲೂ ನಿರಾಸಕ್ತಿ. ಇನ್ನು ನನ್ನ ಹೆಂಡತಿ ಶಾಲಿನಿ, ಯುನಿವರ್ಸಿಟಿಯಲ್ಲಿ ಅಧ್ಯಾಪಕಿ. ಗುಲ್ಬರ್ಗದಲ್ಲಿದ್ದಾಳೆ. ಬಹಳ ಕೆರಿಯರ್ ಓರಿಯೆಂಟೆಡ್, ಹದಿನೈದು ದಿನಕ್ಕೊಮ್ಮೆ ಬಂದು ಹೋಗುತ್ತಾಳೆ. ಮನೆಯಲ್ಲಿ ಎಲ್ಲಾ ಇದ್ದರೂ ಮನೆಯೊಡತಿಯ ಕೊರತೆ ಇದೆ. ಡ್ಯಾಡಿ ಮುಂಚಿನಂತಾಗಬೇಕೆಂದು ಆಸೆ. ನನಗೆ ನಿಮ್ಮಲ್ಲಿ ಇಷ್ಟಪಟ್ಟಿದ್ದು ಇತರರ ಬಗ್ಗೆ ನಿಮಗಿರುವ ನಿಷ್ಕಳಂಕ ಪ್ರೇಮ, ನಿಸ್ವಾರ್ಥ ಮನೋಭಾವ, ಅಚ್ಚುಕಟ್ಟುತನ. ನನ್ನ ತಂದೆಯ ಜೀವನದಲ್ಲಿ ಮತ್ತೊಬ್ಬಳು ಬರುವುದಿದ್ದರೆ ಅದು ನೀವೇ ಸರಿಯಾದ ವ್ಯಕ್ತಿ ಅನ್ನಿಸುತ್ತಿತ್ತು. ಮೇಡಂ ನನಗೆ ತಾಯಿಯಾಗಿ ಎನ್ನಲಾರೆ, ನನ್ನ ಡ್ಯಾಡಿಗೆ ಹೆಂಡತಿಯಾಗಿ, ನಮ್ಮ ಮನೆಯ ಲಕ್ಷ್ಮಿಯಾಗಿ ಎಂದು ಕೇಳಿಕೊಳ್ಳುತ್ತೇನೆ'. ಎಲ್ಲವೂ ಸಾಕು, ಜೀವನದಲ್ಲಿ ಎಲ್ಲವನ್ನೂ ಮಾಡಿ ಮುಗಿಸಿದೆ, ಜೀವನದ ಕೊನೆಯ ದಿನಗಳನ್ನು ಆಶ್ರಮದಲ್ಲಿ ಕಳೆದರಾಯಿತು ಎಂದುಕೊಂಡರೆ ಇದೇನು ಹೊಸ ಪರಿ? ಮನಸ್ಸು ಪುನಃ ಚಿಂತೆಯ ಗೂಡಾಯಿತು. 'ಮೇಡಂ ನೀವು ಹೂಂ ಎಂದಾಗ ಡ್ಯಾಡಿಯನ್ನು ಒಪ್ಪಿಸುವ ಜವಾಬ್ದಾರಿ ನನ್ನದು. ನೀವೂ ಆಲೋಚಿಸಿ'.

ನಾನು ನನ್ನ ಪಾಡಿಗೆ ವೃದ್ಧಾಶ್ರಮದಲ್ಲಿ ನೆಮ್ಮದಿಯಿಂದ ಇದ್ದೆ. ರಾಜೇಶ ಮತ್ತೆ ನನ್ನನ್ನು ಸಂಸಾರದ ಜಂಜಾಟದಲ್ಲಿ ನೂಕುತ್ತಿದ್ದಾರೆ ಅನ್ನಿಸಿತು. ಮನಸ್ಸು ಮತ್ತೆಲ್ಲೊ ಗಂಡ, ಮಗ, ಮಗಳು, ಸೊಸೆ, ಮೊಮ್ಮಕ್ಕಳಂತಹ ಸಂಬಂಧಗಳು ಬೇಕೆನಿಸಿತು. ಈ ಸಂಬಂಧಗಳು ಆಗಾಗ ನೋವು ತಂದರೂ ಹಿತವಾದ್ದದ್ದೇ, ನಮ್ಮವರ ಪ್ರೀತಿಗಿಂತ ಮಿಗಿಲಾದದ್ದು ಯಾವುದಿದೆ? ಆದರೆ ಗೊತ್ತಿದ್ದೂ ಈ ವಯಸ್ಸಿನಲ್ಲಿ ಮತ್ತೊಮ್ಮೆ ಕೈ ಸುಟ್ಟುಕೊಳ್ಳಲಾರೆ, ಅಲ್ಲಿ ಸೋತರೆ ಹೋಗಲು ಬೇರೆ ದಾರಿಯಿಲ್ಲ. ಈ ವಯಸ್ಸಿನಲ್ಲಿ ಹೊಸ ಸಂಬಂಧಗಳನ್ನು ಅರಗಿಸಿಕೊಳ್ಳಲಾರೆ, ಮನಸ್ಸು ಬಲವಾಗಿ ಹಿಮ್ಮೆಟ್ಟಿತು. ಮಗನನ್ನು ಕೇಳಿದರೆ ಹೇಗೆ? ಆದರೆ ಈ ಸಲ ಯಾವ ನಿರ್ಧಾರ ತೆಗೆದುಕೊಂಡರು ಅದು ನನ್ನದೇ ಆಗಿರಬೇಕು, ನನಗಾಗಿ ಆಗಿರಬೇಕು ಅನ್ನಿಸಿತು. ಗೊಂದಲದ ಗೂಡದ ಮನಸ್ಸಿಗೆ ನಿದ್ರೆಯೂ ನನ್ನಿಂದ ದೂರ ಓಡಿತು. ಒಂದು ವಾರದ ನಂತರ ಕಡೆಗೊಂದು ನಿರ್ಧಾರಕ್ಕೆ ಬಂದು ನಿಶ್ಚಿಂತೆಯಿಂದ ಮಲಗಿದೆ.

***

ಆಕಾಶ ನಿಮ್ಮ ಅಮ್ಮನನ್ನು ವೃದ್ಧಾಶ್ರಮದಿಂದ ಕರೆದುಕೊಂಡು ಬನ್ನಿ, ಈಗಷ್ಟೇ ಕೆಲಸಕ್ಕೆ ಸೇರಿದ ನನಗೆ ಪದೇ ಪದೇ ರಜೆ ಹಾಕಲಾಗುವುದಿಲ್ಲ, ನಿಮಗೂ ರಜೆ ಹಾಕಿ ಮನೆಯಲ್ಲಿ ಇರಲಾಗದು, ಮಗುವನ್ನು ಕೆಲಸದವರ ಮೇಲೆ ಬಿಟ್ಟು ಹೋದರೆ ಈಗ ಆದ ಅನಾಹುತ ಕಾಣುತ್ತಿದೆಯಲ್ಲಾ, ಯಾವತ್ತೂ ಅಜ್ಜಿಗೆ ಮೊಮ್ಮಕ್ಕಳ ಪ್ರೀತಿ ಜಾಸ್ತಿ. ಕೂತಲ್ಲಿ, ನಿಂತಲ್ಲಿ ಒಂದು ವಾರದಿಂದೀಚೆಗೆ ಸೀಮಾ ಅಮ್ಮನನ್ನು ಕರೆದುಕೊಂಡು ಬರಲು ಒತ್ತಾಯಿಸುತ್ತಿದ್ದಳು. ಅಮ್ಮ ಮನೆಗೆ ಬರುವುದು ಇಷ್ಟದ ಸಂಗತಿಯಾದರೂ ಬಹಳ ಸ್ವಾಭಿಮಾನವಿರುವ ಅಮ್ಮ ವಾಪಸ್ಸು ಬರುವ ನಂಬಿಕೆ ಇರಲಿಲ್ಲ. ಆದರೂ ಗಟ್ಟಿ ಮನಸ್ಸು ಮಾಡಿ ಆಶ್ರಮಕ್ಕೆ ಮಗುವನ್ನು ಕರೆದುಕೊಂಡು ಹೊರಟೆ.

ಆಶ್ರಮದಲ್ಲಿ ನನ್ನನ್ನು ನೋಡುತ್ತಿದ್ದಂತೆ ಒಂದು ತರಹ ನಕ್ಕ ಮ್ಯಾನೇಜರ್ 'ಬನ್ನಿ ಆಕಾಶ ಬನ್ನಿ, ಬಹಳ ತಡವಾಗಿ ಬಂದಿದ್ದೀರಿ, ನಿಮಗಾಗಿ ಅಮ್ಮ ಕಾಗದ ಕೊಟ್ಟು ಹೋಗಿದ್ದಾರೆ' ಎಂದರು. ಅಂದರೆ ಅಮ್ಮ ಇಲ್ಲಿ ಇಲ್ಲವೇ? ಅಮ್ಮ ಹೋದದ್ದಾದರೂ ಎಲ್ಲಿಗೆ? ಆಲೋಚಿಸುತ್ತಾ ಕಾಗದ ಬಿಡಿಸಿ ಓದ ತೊಡಗಿದೆ. 'ಆಕಾಶ, ನನ್ನ ಜೀವನದ ಈ ಅತೀ ಮುಖ್ಯವಾದ ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ನಿನ್ನ ಹತ್ತಿರ ಕೇಳಬಹುದಿತ್ತು, ಆದರೆ ಈ ಸಲ ನನ್ನ ಜೀವನದ ನಿರ್ಧಾರವನ್ನು ನಾನೇ ತೆಗೆದುಕೊಂಡೆ. ಹೊಸ ಸಂಬಂಧಗಳು ಹುಡುಕಿಕೊಂಡು ಬಂದವು, ಸಂಬಂಧಗಳು ನೋವು ತಂದರೂ ಅವುಗಳೇ ಅಲ್ಲವೇ ನಮ್ಮನ್ನು ಜೀವಂತವಾಗಿಡುವುದು. ನನ್ನ ಹೊಸ ವಿಳಾಸ ಹೀಗಿದೆ, ಪುರುಸೊತ್ತು ಇದ್ದರೆ ಬಾ' ಕೆಳಗೆ ವಿಳಾಸವಿತ್ತು. ಕುತೂಹಲದಿಂದ ಹೊರಟೆ, ಅಮ್ಮನ ಹೊಸ ವಿಳಾಸದ ಮನೆಯ ಗೇಟು ತೆರೆದಾಗ ದೂರದಿಂದಲೇ ನಗು, ಗಲಾಟೆ ಕೇಳಿ ಬರುತ್ತಿತ್ತು. ದೂರದಿಂದಲೇ ಕಿಟಕಿಯಿಂದ ಅಮ್ಮನನ್ನು ನೋಡಿದೆ, ದೊಡ್ಡ ಅಂಚಿನ ಜರಿ ಸೀರೆ, ಹಣೆಯಲ್ಲಿ ದೊಡ್ಡ ಕುಂಕುಮ, ದಪ್ಪ ಮಾಂಗಲ್ಯ, ಕೈ ತುಂಬಾ ಚಿನ್ನದ ಮತ್ತು ಗಾಜಿನ ಬಳೆಗಳು. ಅಷ್ಟರಲ್ಲಿ ಮಗುವೊಂದು 'ಅಜ್ಜಿ, ಅಜ್ಜಿ' ಎನ್ನುತ್ತಾ ಅಮ್ಮನ ತೊಡೆಯೇರಿತು. ನನಗೆ ಅರ್ಥವಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ, ಕಡೆಗೂ ಅಮ್ಮನಿಗೆ ಸಿಗಬೇಕಾದ ಸಂತೋಷ, ನೆಮ್ಮದಿ, ಪ್ರೀತಿ ಸಿಕ್ಕಿತಲ್ಲಾ ಎನಿಸಿ ಸಂತೋಷವಾಯಿತು. ಆದರೆ ನಾನೇನೋ ಅಮೂಲ್ಯವಾದದ್ದನ್ನು ಜೀವನದಲ್ಲಿ ಕಳೆದುಕೊಂಡೆ ಎನಿಸಿತು.